ಉಪಾಧ್ಯಕ್ಷರು: ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವ ಸಲುವಾಗಿ 27 ಸದಸ್ಯರು ನೋಟೀಸ್‌ನ್ನು ಕೊಟ್ಟಿದ್ದಾರೆ. ಒಂದು ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚೆಂದರೆ 2-3 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ಹೆಚ್ಚು ವಿಸ್ತರಿಸಿ ಮಾತನಾಡುವುದು ಬೇಡ. ಶೂನ್ಯ ವೇಳೆಗೆ ಒಂದು ಗಂಟೆಗಿಂತ ಹೆಚ್ಚಿಗೆ ಸಮಯ ತೆಗೆದುಕೊಂಡರೆ ಒರಿಜಿನಲ್ ಡಿಬೆಟ್ ಎಲ್ಲಾ ಹಾಗೆಯೇ ಉಳಿಯುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದ ಹಾಗೆ ಜೀರೋ ಹವರ್ ಮಾಡೋಣ, ಜೀರೋ ಹವರ್ಸ್ ಮಾಡುವುದು ಬೇಡ. ಎರಡೆರಡು ನಿಮಿಷ ಮಾತನಾಡಿದರೆ ಹೆಚ್ಚುಕಡಿಮೆ ಹವರ್‌ನಲ್ಲಿಯೇ ಮುಗಿಯುತ್ತದೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಅ) ವಿಜಾಪುರ ಜಿಲ್ಲೆಯ ಖಾದಿ ಗ್ರಾಮೋದ್ಯೋಗದ ಖಾದಿ ಅರಿವೆಗಳ ಮೇಲಿನ ರಿಬೆಟನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇಲ್ಲಿಯವರೆಗೆ ಪಾವತಿ ಮಾಡದೇ ಇರುವುದು.

+ ಶ್ರೀ ಬಸವನಗೌಡ ಆರ್.ಪಾಟೀಲ್ (ಬಿಜಾಪುರ): ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಖಾದಿ ಗ್ರಾಮೋದ್ಯೋಗದ ಖಾದಿ ಅರಿವೆಗಳ ಮೇಲಿನ ರಿಬೆಟನ್ನು ಕರ್ನಾಟಕ ರಾಜ್ಯ ಸರ್ಕಾರ ಮತ್ತು ಕೇಂದ್ರಸರ್ಕಾರ ಇಲ್ಲಿಯವರೆಗೆ ಪಾವತಿ ಮಾಡದೇ ಇರುವುದರಿಂದ ಸರ್ಕಾರದಿಂದ ಬರಬೇಕಾದಂಥ ಸುಮಾರು 37 ಲಕ್ಷ ರೂಪಾಯಿಗಳು ಬಾರದೇ ಇರುವುದರಿಂದ ಮತ್ತು 1-4-1999ರ ಕೇಂದ್ರ ಮತ್ತು ರಾಜ್ಯಸರ್ಕಾರಗಳ ರಿಬೆಟ್ ಘೋಷಣೆ ಆಗದಿರುವುದರಿಂದ ಮಹಾತ್ಮಗಾಂಧೀಜಿಯವರು ಕಂಡಂಥ ಕನಸಿನ ಖಾದಿ ಗ್ರಾಮೋದ್ಯೋಗದ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಆದ್ದರಿಂದ, ಈ ಖಾದಿ ಸಂಸ್ಥೆಗಳಿಗೆ ಬರಬೇಕಾದಂಥ ರಿಬೆಟ್ ಹಣದ ಬಗ್ಗೆ ಮತ್ತು ಅವುಗಳ ಸ್ಥಿತಿಯ ಬಗ್ಗೆ ಚಿಂತನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಸಣ್ಣ ಕೈಗಾರಿಕಾ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ಜಿಲ್ಲೆಯಲ್ಲಿ 9 ಖಾದಿ ಭಂಡಾರಗಳು ಇದ್ದು 1997-98ರಲ್ಲಿ ಬಿಜಾಪುರ ಜಿಲ್ಲೆಗೆ 20.20 ಲಕ್ಷ ರಿಬೆಟ್ ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಸಂಪೂರ್ಣವಾಗಿ ಪಾವತಿ ಸಹಿತ ಮಾಡಲಾಗಿದೆ. 1998-99ನೇ ಸಾಲಿನ ರಿಯಾಯಿತಿ ಬಿಲ್ ಏನು ಪಾವತಿ ಮಾಡಬೇಕಿತ್ತು ಅದು ಬಿಲ್ ಬಂದ ತಕ್ಷಣ ಉಳಿದಂಥ ಹಣವನ್ನು ಸಹ ಬಿಡುಗಡೆ ಮಾಡಲಿಕ್ಕೆ ಕ್ರಮ ಕೈಗೊಳ್ಳಲಾಗುವುದು. ಎರಡನೆಯದಾಗಿ, 1-4-1999ರ ನಂತರ ಖಾದಿ ಬಟ್ಟೆ ಮೇಲೆ ಇದ್ದಂಥ ರಿಯಾಯಿತಿಯನ್ನು ಕೇಂದ್ರ

ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಘೋಷಣೆ ಮಾಡಲಿಲ್ಲ. ಕೇಂದ್ರಸರ್ಕಾರ ಘೋಷಣೆಯನ್ನು ಮಾಡಿದ ನಂತರ ರಾಜ್ಯಸರ್ಕಾರ ಮಾಡಬೇಕಾದಂಥ ಒಂದು ಪದ್ಧತಿ ಇದೆಯೆಂದು ಈ ಸಂದರ್ಭದಲ್ಲಿ ಶಾಸಕರ ಗಮನಕ್ಕೆ ತರಬಯಸುತ್ತೇನೆ. ಹಾಗೆಯೇ ನಮ್ಮ ರಾಜ್ಯದಲ್ಲಿ ಈಗಾಗಲೇ ಖಾದಿ ಬಟ್ಟೆ ಮೇಲೆ ಆಸಕ್ತಿವಹಿಸಿ ಖಾದಿ ಬಟ್ಟೆ ಜನಪ್ರಿಯವಾಗಬೇಕೆಂದು ತಿಳಿದುಕೊಂಡು ಮೊಬೈಲ್ ವ್ಯಾನ್‌ಗಳ ಮುಖಾಂತರವಾಗಿ ಎಲ್ಲಾ ಕಡೆ ಪ್ರಚಾರ ಮಾಡುತ್ತಿದ್ದೇವೆ. ಖಾದಿ ಗ್ರಾಮೋದ್ಯೋಗ ಮಂಡಳಿಗಳಿಂದ ಹಳ್ಳಿಹಳ್ಳಿಗಳಿಗೆ ಹೋಗಿ ಖಾದಿ ಬಟ್ಟೆಗಳು ಮತ್ತು ರಿಬೆಟ್ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ತಿಳುವಳಿಕೆ ಕೊಡುವುದಕ್ಕೆ ಈಗಾಗಲೇ ರಾಜ್ಯಸರ್ಕಾರದಲ್ಲಿ ಮಾಡುತ್ತಿದ್ದೇವೆ. ಉತ್ತಮವಾದಂಥ ಖಾದಿ ವಸ್ತುಪ್ರದರ್ಶನವನ್ನು ಮಾಡಿದ ಸಲುವಾಗಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಸರ್ಕಾರಕ್ಕೆ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಮತ್ತು ರಾಜ್ಯಸರ್ಕಾರದ ಮಟ್ಟಿಗೆ ಹೇಳಬೇಕಾದರೆ ಸ್ವಾತಂತ್ರ್ಯ ಸುವರ್ಣಮಹೋತ್ಸವದ ಅಂಗವಾಗಿ ನಾವೇ ರಿಬೆಟ್‌ನ್ನು ಕೊಡಬೇಕಿತ್ತು. ಆರೂವರೆ ಕೋಟಿ ರೂಪಾಯಿಗಳಷ್ಟು ಹಣ ಮಂಜೂರಾತಿಯಾಗಿದ್ದು ಅದರಲ್ಲಿ 1 ಕೋಟಿ 30 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ ಮತ್ತು 5.20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಬರೆದು ಕಳುಹಿಸಿದ್ದೇವೆ. ಈಗಾಗಲೇ ಆರ್ಥಿಕ ಇಲಾಖೆಯವರು ತಮ್ಮ ಸಹಮತಿ ಕೊಟ್ಟಿದ್ದಾರೆ. ಸ್ವಾತಂತ್ರ್ಯೋತ್ಸವ ಅಂಗವಾಗಿ ನಾವೇನು ರಿಯಾಯಿತಿ ಕೊಟ್ಟಿದ್ದೇವೆ ಅದಕ್ಕೂ ಸಹ ಆರ್ಥಿಕ ಇಲಾಖೆ ಸಹಮತಿ ಕೊಟ್ಟಿದೆ. ಆದಷ್ಟು ಬೇಗ ರಿಯಾಯಿತಿ ಹಣವನ್ನು ಬಿಡುಗಡೆ ಮಾಡಿ ಸದಸ್ಯರ ಆಕಾಂಕ್ಷೆಗನುಗುಣವಾಗಿ ಕಾರ್ಯಕ್ರಮ ರೂಪಿಸಲು ಪ್ರಯತ್ನಿಸುತ್ತೇನೆ.

ವಿಷಯ: (ಅ) ಗುಲ್ಬರ್ಗದಲ್ಲಿ ಮುಸ್ಲಿಂ ವಿದ್ಯಾರ್ಥಿ ಕೊಲೆ

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ (ಬೀದರ್): ಗೃಹ ಮಂತ್ರಿಗಳು ಇಲ್ಲ. ಇದು ಸೆನ್ಸಿಟೀವ್ ಸಬ್ಜೆಕ್ಟ್. ಯಾರು ಉತ್ತರ ಕೊಡುತ್ತಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಇದು ತುಂಬಾ ಮುಖ್ಯವಾದ ಅಧಿವೇಶನ ಮತ್ತು ಕೊನೆಯ ಅಧಿವೇಶನ. ಸಮಸ್ಯೆಗಳಿಗೇನಾದರೂ ಪರಿಹಾರ ಸಿಗುತ್ತದೆಂದು ನಾವು ಇಲ್ಲಿ ಸೇರಿರುವುದು. ಮಂತ್ರಿಗಳಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು: ಗೃಹಮಂತ್ರಿಗಳು ಬಾಂಬೆಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ: ಇವರು ಸಮಸ್ಯೆಯನ್ನು ಬಗೆಹರಿಸಲ್ಲ.